DAVANGERE SUGAR
COMPANY LIMITED
CIN: L10721KA1970PLC001949

November 15, 2025

**BSE Limited**
Corporate Relationship Department
1st Floor, New Trading Ring,
Rotunda bldg., P.J. Towers,
Dalal Street, Mumbai- 400001
Scrip Code: 543267

**National Stock Exchange of India**
Corporate Service
Exchange Plaza,
Bandra Kurla Complex,
Bandra (East), Mumbai -400051
NSE Symbol: DAVANGERE

Kind Attn : The Manager,
Department of Corporate Services

Kind Attn: The Manager,
Listing Department

Dear Sir/ Madam,

**Sub: Newspaper Publications of the Extract of Un-Audited Financial Results for the Quarter and Half-Year ended on 30th September 2025, as per Regulation 47 of the SEBI (Listing Obligation & Disclosure Requirement) Regulations, 2015.**

Pursuant to Regulation 47 of SEBI (Listing Obligation and Disclosure Requirement) Regulation, 2015, we are submitting herewith newspaper publications of the Un-Audited Financial Results for the quarter and half-year ended on September 30, 2025, published in the following Newspapers:

1. The New Indian Express (English) dated 15th November, 2025;
2. Nagaravani (Kannada) dated 15th November, 2025;

Kindly acknowledge and take the same on record.

Thanking You,
**For Davangere Sugar Company Limited**

UMA SINGH
Digitally signed by UMA SINGH
Date: 2025.11.15 13:42:05 +05'30'

**Uma Singh**
**Company Secretary and Compliance Officer**
**Membership No.**

**Encl. as above**

# ಕ್ರೀಡಾಪಟುಗಳಿಗೆ ನಗದು ಪುರಸ್ಕಾರಕ್ಕಾಗಿ ಅರ್ಜಿ ಆಹ್ವಾನ

ದಾವಣಗೆರೆ ನ.14: 2023-24ನೇ ಸಾಲಿನಲ್ಲಿ ವಿವಿಧ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಭಾಗವಹಿಸಿ ಪದಕ ಪಡೆದ ಕರ್ನಾಟಕ ಕ್ರೀಡಾಪಟುಗಳಿಗೆ ನಗದು ಪುರಸ್ಕಾರಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿಗಳನ್ನು ಕ್ರೀಡಾಪಟುಗಳು ಅಧಿಕೃತ ಜಾಲತಾಣ http://sevasindhu.karnataka.gov.in ಆನ್ ಲೈನ್ ಮೂಲಕ ಡಿಸೆಂಬರ್ 3 ರೊಳಗಾಗಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ದೂ.ಸಂ:08192-237480 ನ್ನು ಸಂಪರ್ಕಿಸಲು ಇಲಾಖೆಯ ಸಹಾಯಕ ನಿರ್ದೇಶಕರಾದ ಹರ್ಷ ತಿಳಿಸಿದ್ದಾರೆ.

**ಕಥೆ-ಕವನ, ಚುಟುಕು, ಮಕ್ಕಳು ಬಿಡಿಸಿದ ಚಿತ್ರಗಳನ್ನು ಪ್ರಕಟಿಸುವ ವಿಭಾಗ**
**9740137083**

### ದಿನಕ್ಕೊಂದು ಚುಟುಕು

ಅಭಿಪ್ರಾಯ :-

ತಳವೂರಿ ಕೂತ ಅಭಿಪ್ರಾಯವ ಸಾಕದಿರು
ಮಣಭಾರದ ನೋವ ನಿತ್ಯಹೊತ್ತು ಸಾಗದಿರು
ನೆನ್ನೆಯ ವಿವೇಚನೆಯ ಇಂದಿಗೆ ತೂಗದಿರು
ಇಂದು, ನಾಳೆಯ ನಲಿವಿಗೆ ಕೊಳ್ಳಿಯಿಡದಿರು ॥

– ಲಿಂಗೇಶ್ ಹೆಚ್ ಬಿದರಕುಂದಿ

### ದಿನಕ್ಕೊಂದು ನುಡಿ ಮುತ್ತು

ಅಹಂಕಾರ ನಮ್ಮನ್ನು
ಒಳಗೊಳಗೇ ಕೊಲ್ಲುವ,
ನಮ್ಮತನವನ್ನು
ಕ್ಷೀಣಿಸುವಂತೆ ಮಾಡುವ
ಇತರರು ನಮ್ಮನ್ನು ಅಗೌರವದಿಂದ
ನೋಡುವಂತೆ ಮಾಡುವ
ನಮ್ಮನ್ನು ಕೀಳುಮಟ್ಟಕ್ಕಿಳಿಸುವ
ನಮ್ಮ ಆಂತರ್ಯದಲ್ಲಿ
ಹುದುಗಿರುವ ವಿಷಬೀಜ!

– ಮಂಜುಳಾ ಪ್ರಸಾದ್ ದಾವಣಗೆರೆ



ಪತ್ರಿಕೆಗಳಿಗೆ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ
08192-254186


# ಕನ್ನಡ ರಾಜ್ಯೋತ್ಸವ ನಾಡಿನ ಗುರುತು, ಈ ಮಣ್ಣಿನ ಮಮತೆ: ಮಂಜುನಾಥ



ದಾ ನಗರವಾಣಿ ಸುದ್ದಿ

ದಾವಣಗೆರೆ : ಬಾಪೂಜಿ ಎಜುಕೇಷನಲ್ ಅಸೋಸಿಯೇಷನ್‌ಗೆ ಸೇರಿದ ನಗರದ ಬಾಪೂಜಿ ಹೈಯರ್ ಪ್ರೈಮರಿ ಇಂಗ್ಲಿಷ್ ಸ್ಕೂಲ್‌ನಲ್ಲಿ ಶುಕ್ರವಾರ ಕನ್ನಡ ರಾಜ್ಯೋತ್ಸವ ಮತ್ತು ಮಕ್ಕಳ ದಿನಾಚರಣೆಯನ್ನು ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಶಾಲೆಯ ಮುಖ್ಯಸ್ಥ ಮಂಜುನಾಥ ರಂಗರಾಜು ಮಾತನಾಡಿ, "ಕನ್ನಡ ರಾಜ್ಯೋತ್ಸವವು ಕೇವಲ ಹಬ್ಬವಲ್ಲ, ಇದು ನಮ್ಮ ನಾಡಿನ ಗುರುತು ಮತ್ತು ಮಣ್ಣಿನ ಮಮತೆ. ಮಕ್ಕಳಿಗೆ ಕನ್ನಡದ ಘನತೆ, ಅದರ ಸಾಹಿತ್ಯ-ಸಂಸ್ಕೃತಿ ಪರಿಚಯಿಸಬೇಕಾದ ಜವಾಬ್ದಾರಿ ಶಾಲೆಗಳದ್ದು," ಎಂದು ಹೇಳಿದರು.

"ಮಕ್ಕಳು ನಮ್ಮ ದೇಶದ ಭವಿಷ್ಯ. ಅವರ ನಿರ್ದೋಷಿ ನಗೆ, ಸೃಜನಶೀಲತೆ ಮತ್ತು ತಿಳುವಳಿಕೆಯನ್ನು ಪೋಷಿಸುವುದು ನಮ್ಮ ಮುಖ್ಯ ಕರ್ತವ್ಯ," ಎಂದರು.

ಕ್ಷೇತ್ರ ಸಮನ್ವಯ ಅಧಿಕಾರಿ ಚೌಡಪ್ಪ ಬಿ. ಎನ್ ಮಾತನಾಡಿ, ಶಾಲೆಯ ಮಕ್ಕಳು ಮುಂದೆ ಒಬ್ಬ ವಿಜ್ಞಾನಿ, ತತ್ವಜ್ಞಾನಿ, ಜಿಲ್ಲಾಧಿಕಾರಿ ಇನ್ನು ಮುಂತಾದ ಉನ್ನತ ಹುದ್ದೆಗಳನ್ನು ಪಡೆದು ಕನ್ನಡ ಮಾತೆ ಸೇವೆ ಮಾಡಬೇಕೆಂದು, ಹಾಗೂ ಬೈದು ಹೇಳುವುದು ಬದುಕಿಗಾಗಿ ಶಿಕ್ಷಕರ ಬೈಗುಳದಿಂದ ಹಾಗೂ ಆಶೀರ್ವಾದದಿಂದ ನಿಮ್ಮ ಬದುಕು ಹಸನಾಗುತ್ತದೆ ಹೇಳಿದರು.

ಸಮೂಹ ಸಂಪನ್ಮೂಲ ವ್ಯಕ್ತಿ ರಾಜಪ್ಪ ಜೆ.ಎಚ್ ಮಾತನಾಡಿ, 'ಕನ್ನಡ ರಾಜ್ಯೋತ್ಸವವು ಬೆಳವಣಿಗೆಯ, ಶಾಂತಿಯ, ಮತ್ತು ಸಹಬಾಳ್ವೆಯ ಆಚರಣೆ. ಇಂತಹ ದಿನಗಳು ಮಕ್ಕಳಲ್ಲಿ ಭಾಷೆಯ ಪ್ರೇಮ ಬೆಳೆಸುತ್ತವೆ. ಮಕ್ಕಳ ದಿನವು ಭವಿಷ್ಯದ ಬೆಳವಣಿಗೆಗೆ ದಾರಿ ತೋರುವ ಬೆಳಕಿನಂತದ್ದು," ಎಂದು ಅಭಿಪ್ರಾಯಪಟ್ಟರು.

ಪ್ರಾಂಶುಪಾಲರಾದ ಶ್ರೀಮತಿ ಜೆ . ಎಸ್. ವನಿತಾ ಮಾತನಾಡಿ, "ಕನ್ನಡ ನಮ್ಮ ಗುರುತು, ನಮ್ಮ ಹೆಮ್ಮೆ. ರಾಜ್ಯೋತ್ಸವವು ಮಕ್ಕಳಿಗೆ ಕನ್ನಡದ ಸಮೃದ್ಧ ಪರಂಪರೆ ಹಾಗೂ ಆದರ್ಶಗಳನ್ನು ಪರಿಚಯಿಸುವ ಸುವರ್ಣಾವಕಾಶ. ಮಕ್ಕಳ ದಿನಾಚರಣೆ ನಮ್ಮ ವಿದ್ಯಾರ್ಥಿಗಳ ಕೌಶಲ್ಯ ಮತ್ತು ಸೃಜನಶೀಲತೆಯನ್ನು ಗೌರವಿಸುವ ವೇದಿಕೆ ಎಂದು ಹೇಳಿದರು.

ವಿದ್ಯಾರ್ಥಿ ಆಯುಷ್ ಆತಿಥ್ಯ ಭಾಷಣದೊಂದಿಗೆ ಕಾರ್ಯಕ್ರಮ ಪ್ರಾರಂಭಗೊಂಡಿತು. ಪ್ರಾರ್ಥನಾ ಗೀತೆ, ಸ್ವಾಗತ ನೃತ್ಯ ಹಾಗೂ ದಿನದ ಮಹತ್ವದ ಕುರಿತು ವಿದ್ಯಾರ್ಥಿಗಳ ಮನಮುಟ್ಟುವ ಪ್ರದರ್ಶನಗಳು ಕಾರ್ಯಕ್ರಮಕ್ಕೆ ಬಣ್ಣ ತುಂಬಿದವು. ನಾಟಕ, ಮ್ಯಾಡ್ ಆ್ಯಡ್ಸ್, ಮೈಮ್, ವಿಶೇಷ ನೃತ್ಯಗಳು, ಜೂನಿಯರ್ ಗುಂಪುಗೀತೆ ಮತ್ತು ಇತರೆ ಸಾಂಸ್ಕೃತಿಕ ಅಂಶಗಳು ಮಕ್ಕಳ ಕಲಾ ಪ್ರತಿಭೆಯನ್ನು ಸೊಗಸಾಗಿ ಅನಾವರಣಗೊಳಿಸಿದವು.

ಎಲ್ಲಾ ಶಿಕ್ಷಕ ವೃಂದದವರು ಮಕ್ಕಳನ್ನು ರಂಜಿಸಲು ವಿವಿಧ ನೃತ್ಯಗಳನ್ನು ನಿರ್ವಹಿಸಿ ತಮ್ಮ ಕಾರ್ಯಕ್ಷಮತೆಯನ್ನು ಮೆರೆದರು. ಶಾಲೆ ಎಲ್ಲಾ ಉಸ್ತುವಾರಿಗಳು ಉಪಸ್ಥಿತರಿದ್ದು, ಕಾರ್ಯಕ್ರಮಕ್ಕೆ ಮೆರುಗು ತಂದರು. ಕಾರ್ಯಕ್ರಮದ ನಿರೂಪಣೆಯನ್ನು 9ನೇ ತರಗತಿ ವಿದ್ಯಾರ್ಥಿಗಳಾದ ಕುಮಾರಿ ಮಾನ್ವಿ ಮತ್ತು ಕುಮಾರಿ ನಂದಿತಾ ಅವರು ಸಮರ್ಪಕವಾಗಿ ನಿರ್ವಹಿಸಿದರು.

# ಸಾಲುಮರದ ತಿಮ್ಮಕ್ಕ ಇನ್ನಿಲ್ಲ

(1ನೇ ಪುಟದಿಂದ)

ತಿಮ್ಮಕ್ಕ ಅವರ ಮಹತ್ತರ ಸಾಧನೆಗೆ ಹಲವಾರು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸಂಸ್ಥೆಗಳು ಪ್ರಶಸ್ತಿ ನೀಡಿ ಸನ್ಮಾನಿಸಿವೆ. ರಾಜ್ಯೋತ್ಸವ ಪ್ರಶಸ್ತಿ, ಆರ್ಟ್ ಆಫ್ ಲಿವಿಂಗ್ ಸಂಸ್ಥೆಯಿಂದ ವಿಶಾಲಾಕ್ಷಿ ಪ್ರಶಸ್ತಿ, 2010ನೇ ಸಾಲಿನ ಪ್ರತಿಷ್ಠಿತ 'ನಾಡೋಜ' ಪ್ರಶಸ್ತಿ ಸೇರಿ 2019ರಲ್ಲಿ ಪದ್ಮಶ್ರೀ ಪ್ರಶಸ್ತಿ ಪ್ರಶಸ್ತಿಗೂ ಇವರು ಪಾತ್ರರಾಗಿದ್ದಾರೆ. 2020ರಲ್ಲಿ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ ತಿಮ್ಮಕ್ಕನವರಿಗೆ ಗೌರವ ಡಾಕ್ಟರೇಟ್ ನೀಡಿ ಗೌರವಿಸಿದೆ.

ಮರ, ಗಿಡಗಳನ್ನು ತಮ್ಮ ಮಕ್ಕಳಂತೆಯೇ ಪ್ರೀತಿಸುತ್ತಿದ್ದರು. ತಿಮ್ಮಕ್ಕ ಅವರಿಗೆ 1995ರಲ್ಲಿ ರಾಷ್ಟ್ರೀಯ ಪೌರ ಪ್ರಶಸ್ತಿ, 1997ರಲ್ಲಿ ಇಂದಿರಾ ಪ್ರಿಯದರ್ಶಿನಿ ವೃಕ್ಷಮಿತ್ರ ಪ್ರಶಸ್ತಿ, 2019ರಲ್ಲಿ ಪದ್ಮಶ್ರೀ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ ಹಾಗೂ ನಾಡೋಜ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

2023 ರ ಅಕ್ಟೋಬರ್‌ನಲ್ಲಿ ಅಸ್ತಮಾದ ತೀವ್ರ ಉಲ್ಬಣದಿಂದಾಗಿ ಅಕ್ಟೋಬರ್ 3 ರಂದು ಅಪೋಲೋ ಸ್ಪೆಷಾಲಿಟಿ ಆಸ್ಪತ್ರೆಗೆ ಸಾಲುಮರದ ತಿಮ್ಮಕ್ಕರನ್ನು ದಾಖಲಾಗಿತ್ತು. ಅಲ್ಲಿಂದ ಅವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು.ಸಾಲು ಮರದ ತಿಮ್ಮಕ್ಕ ನಿಧನಕ್ಕೆ ಸಿಎಂ -ಡಿಸಿಎಂ ಸೇರಿದಂತೆ ಹಲವು ಗಣ್ಯರು ಸಂತಾಪ ಸೂಚಿಸಿದ್ದಾರೆ.

# ವೀರಶೈವ ಧರ್ಮ ಗಂಗೋತ್ರಿ ಎಲ್ಲಿಯೂ ಬತ್ತದಂತೆ ಶಕ್ತಿ ತುಂಬಿದವರು ಹಿರಿಯ ಕಾಶಿ ಜಗದ್ಗುರುಗಳು



ಸೊಲ್ಲಾಪೂರ : ವಿಶಾಲವಾದ ವೀರಶೈವ ಧರ್ಮ ಗಂಗೋತ್ರಿಯು ಎಲ್ಲಿಯೂ ಬತ್ತದಂತೆ ಕಾಳಜಿ ವಹಿಸಿ, ಅದು ಎಲ್ಲೆಡೆ ನಿರಂತರ ಮೈದುಂಬಿ ಪ್ರವಹಿಸಲು ಶಕ್ತಿತುಂಬಿ ಶ್ರಮಿಸಿದ ಶ್ರೇಯಸ್ಸು ಕಾಶಿ ಜ್ಞಾನ ಪೀಠದ ಹಿರಿಯ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರಿಗೆ ಸಲ್ಲುತ್ತದೆ ಎಂದು ಶ್ರೀಶೈಲ ಪೀಠದ ಜಗದ್ಗುರು ಡಾ. ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಭಗವತ್ಪಾದರು ಹೇಳಿದರು.

ಅವರು ಸೊಲ್ಲಾಪುರ ನಗರದ ಸೇಳಗಿಯ ಡಾ.ಶೈಲೇಶ್ ಜಗದೀಶ ಪಾಟೀಲ ಗಾರ್ಡನ್‌ದಲ್ಲಿ ಭಕ್ತ ಗಣ ಹಮ್ಮಿಕೊಂಡಿದ್ದ ಕಾಶಿ ಪೀಠದ ಜಗದ್ಗುರು ಡಾ.ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರ 36ನೆಯ ಪೀಠಾರೋಹಣ ವರ್ಧಂತಿ ಮಹೋತ್ಸವವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು. ಕಾಶಿ ಪೀಠದಲ್ಲಿ ಕಳೆದ 36 ವರ್ಷಗಳ ಸುದೀರ್ಘ ಅವಧಿಯಲ್ಲಿ ವೀರಶೈವ ವಾಙ್ಮಯ ಲೋಕ ವಿಸ್ತೃತವಾಗಿ ಬೆಳೆದು ಬಲಗೊಳ್ಳಲು ಶಕ್ತಿಮೀರಿ ಶ್ರಮಿಸಿರುವ ಡಾ. ಚಂದ್ರಶೇಖರ ಜಗದ್ಗುರುಗಳು, ವಿಶೇಷವಾಗಿ ವೀರಶೈವ ಧರ್ಮಗ್ರಂಥವೆಂದೇ ಪ್ರಸಿದ್ಧಿ ಪಡೆದಿರುವ 'ಶ್ರೀಸಿದ್ಧಾಂತ ಶಿಖಾಮಣಿ'ಯು ರಷ್ಯಾ ದೇಶವೂ ಸೇರಿ ಒಟ್ಟು 20 ಭಾಷೆಗಳಿಗೆ ಅದನ್ನು ಭಾಷಾಂತರಿಸಿ ವೀರಶೈವ ಧರ್ಮದ ಮೂಲ ತತ್ವಾದರ್ಶಗಳು ಭಾರತದೆಲ್ಲೆಡೆ ಪ್ರಸಾರವಾಗುವಂತೆ ಮಾಡಿದರು ಎಂದರು.

ಮೂಲತಃ ಕನ್ನಡಿಗರೇ ಆಗಿರುವ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು ಕನ್ನಡ, ಸಂಸ್ಕೃತ, ಹಿಂದಿ, ಮರಾಠಿ ಭಾಷೆಗಳಲ್ಲಿ ಆಳವಾದ ಜ್ಞಾನ ಹೊಂದಿದ್ದು, ಇದರಿಂದಾಗಿ ಭಾರತದ ಬಹುತೇಕ ರಾಜ್ಯಗಳಲ್ಲಿ ಇವರು ಕೈ-ಕೊಂಡ ಧರ್ಮ ಜಾಗೃತಿ ಯಾತ್ರೆಗಳು ಫಲಿಸಿದ್ದು, ಎಲ್ಲೆಡೆ ಅಷ್ಟಾವರಣ, ಪಂಚಾಚಾರ ಮತ್ತು ಷಟ್‌ಸ್ಥಲಗಳ ಮೂಲ ಸಿದ್ಧಾಂತದ ವ್ಯಾಪಕ ಪ್ರಸಾರವು ಸುಲಭ ಸಾಧ್ಯವಾಯಿತು ಎಂದೂ ಶ್ರೀಶೈಲ ಜಗದ್ಗುರುಗಳು ಶ್ಲ್ಯಾಘಿಸಿದರು.

ತಮ್ಮ 36ನೆಯ ಪೀಠಾರೋಹಣ ವರ್ಧಂತಿ ಮಹೋತ್ಸವದ ಸಂದರ್ಭದಲ್ಲಿ ಕರ್ನಾಟಕ ಮತ್ತು ಮಹಾರಾಷ್ಟ್ರ ಭಕ್ತಗಣ ನೀಡಿದ ಗೌರವವನ್ನು ಸ್ವೀಕರಿಸಿ ಆಶೀರ್ವಚನ ನೀಡಿದ ಕಾಶಿ ಜ್ಞಾನ ಪೀಠದ ಹಿರಿಯ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು, ನಮ್ಮ ಪೀಠದ ಶೈವಭಾರತೀ ಶೋಧ ಪ್ರತಿಷ್ಠಾನ ಹಾಗೂ ಶ್ರೀಜಗದ್ಗುರು ವಿಶ್ವಾರಾಧ್ಯ ಜನಕಲ್ಯಾಣ ಪ್ರತಿಷ್ಠಾನಗಳ ಅಡಿಯಲ್ಲಿ ಮೂಲ ವೀರಶೈವ ಸಿದ್ಧಾಂತವು ಎಲ್ಲಿಯೂ ಮಂಕಾಗದಂತೆ ಎಲ್ಲಾ ನೆಲೆಗಳಲ್ಲಿ ಕಾಳಜಿ ವಹಿಸಿ ಅದಕ್ಕೆ ಭದ್ರ ನೆಲೆಯನ್ನು ಒದಗಿಸಲಾಗಿದೆ. ಜೊತೆಗೆ ವೀರಶೈವ ಧರ್ಮದ ಸಾಹಿತ್ಯ ಸಂವರ್ಧನೆಗೂ ಶಕ್ತಿಮೀರಿ ಶ್ರಮಿಸಿ, ಅನೇಕ ಮಹತ್ವದ ಉದ್ಗ್ರಂಥಗಳನ್ನು ಕಾಶಿ ಪೀಠವು ಪ್ರಕಟಿಸಿ ಧನ್ಯತೆಯನ್ನು ಹೊಂದಿದೆ ಎಂದರು.

ಕಾಶಿ ಜ್ಞಾನ ಪೀಠದ ಕಿರಿಯ ಜಗದ್ಗುರು ಡಾ. ಮಲ್ಲಿಕಾರ್ಜುನ ವಿಶ್ವಾರಾಧ್ಯ ಶಿವಾಚಾರ್ಯ ಭಗವತ್ಪಾದರು, ಕರ್ನಾಟಕ ಮತ್ತು ಮಹಾರಾಷ್ಟ್ರ ರಾಜ್ಯಗಳ ಸುಮಾರು 20ಕ್ಕೂ ಹೆಚ್ಚು ಶಿವಾಚಾರ್ಯ ಶ್ರೀಗಳು, ಸೊಲ್ಲಾಪೂರ ಶಾಸಕ ವಿಜಯಕುಮಾರ ದೇಶಮುಖ, ಮಾಜಿ ಶಾಸಕ ಬಸವರಾಜ ಪಾಟೀಲ, ಖ್ಯಾತ ಹೃದಯ ರೋಗ ತಜ್ಞ ಡಾ.ಶೈಲೇಶ್ ಪಾಟೀಲ ಸೇರಿದಂತೆ ಅನೇಕ ಗಣ್ಯರು ಇದ್ದರು, ಇದೇ ಸಂದರ್ಭದಲ್ಲಿ ಸೊಲ್ಲಾಪೂರದ ವೀರಶೈವ ಸಮಾಜದ ಮುಖಂಡ ಜಗದೀಶ ಪಾಟೀಲ ಅವರ 75ನೆಯ ಹುಟ್ಟು ಹಬ್ಬದ ಸಂದರ್ಭದಲ್ಲಿ ಅವರ ಗ್ರಂಥ ತುಲಾಭಾರ ಜರುಗಿಸಲಾಯಿತು.

# ಬಿಹಾರ ಗೆಲುವು; ಹರಪನಹಳ್ಳಿಯಲ್ಲಿ ಸಂಭ್ರಮ



ದಾ ನಗರವಾಣಿ ಸುದ್ದಿ

ಹರಪನಹಳ್ಳಿ: ಬಿಹಾರ ವಿಧಾನಸಭಾ ಚುನಾವಣೆಯಲ್ಲಿ ಎನ್‌ಡಿಎ ಮೈತ್ರಿಕೂಟ ಅಭೂತಪೂರ್ವ ಗೆಲುವು ಸಾಧಿಸಿದ ಹಿನ್ನೆಲೆಯಲ್ಲಿ ಬಿಜೆಪಿ ಕಾರ್ಯಕರ್ತರು ಶುಕ್ರವಾರ ಪಟ್ಟಣದಲ್ಲಿ ಪಟಾಕಿ ಸಿಡಿಸಿ ಸಿಹಿ ಹಂಚಿ ಸಂಭ್ರಮಿಸಿದರು.

ಬಿಜೆಪಿ ಮಂಡಲ ಅಧ್ಯಕ್ಷ ಕೆ.ಶೇಖರಪ್ಪ, ಪುರಸಭೆ ಸದಸ್ಯರಾದ ಕಿರಣ್ ಶನ್ಬೋಗ್, ವಿನಯ್‌ಗೌಳಿ, ಎಂ.ಕೆ. ಜಾವೀದ್ ಮುಖಂಡರಾದ ಬಾಗಳಿ ಕೊಟ್ರೇಶಪ್ಪ ಆರ್.ಲೋಕೇಶ, ಎಂ.ಮಲ್ಲೇಶ, ಶಿರಗಾನಹಳ್ಳಿ ವಿಶ್ವನಾಥ್, ಸೂರ್ಯನಾಯ್ಕ್, ಪ್ರಸನ್ನ, ಮಹೇಶ ಸೇರಿದಂತೆ ಕಾರ್ಯಕರ್ತರು ಇದ್ದರು.

# ಮೋದಿ ನಾಯಕತ್ವ, ಆಡಳಿತಕ್ಕೆ ಬಿಹಾರ...

(1ನೇ ಪುಟದಿಂದ) ವಿಶ್ವವೇ ಮೋದಿಯ ನಾಯಕತ್ವವನ್ನು ಮೆಚ್ಚಿಕೊಂಡಿದೆ ಇನ್ನು ಬಿಹಾರದ ಜನತೆ ಒಪ್ಪಲ್ಲವೇ, ಕಾಂಗ್ರೆಸ್ ನೇತೃತ್ವದ ಮಹಾಘಟಬಂಧನ್ ಎಷ್ಟೆ ಅಪಪ್ರಚಾರ ಮಾಡಿದರು ಅದನ್ನು ಮತದಾರ ಸ್ವೀಕರಿಸಿಲ್ಲ ಇನ್ನಾದರೂ ಸುಳ್ಳು ಅಪಪ್ರಚಾರ ಮಾಡುವುದನ್ನು ಕಾಂಗ್ರೆಸ್ ಪಕ್ಷ ಬಿಡಲಿ ಎಂದರು.ಬಿಜೆಪಿ ಜಿಲ್ಲಾ ಮಾಜಿ ಅಧ್ಯಕ್ಷ ಎಸ್.ಎಂ.ವಿರೇಶ್ ಹನಗವಾಡಿ ಮಾತನಾಡಿ ಚುನಾವಣಾ ಆಯೋಗ, ನ್ಯಾಯಾಲಯ ಹಾಗೂ ಮಾಧ್ಯಮದವರನ್ನು ಸಹ ನಂಬದ ಕಾಂಗ್ರೆಸ್ ಪಕ್ಷಕ್ಕೆ ಬಿಹಾರದ ಜನತೆ ಸರಿಯಾದ ಪಾಠ ಕಲಿಸಿದ್ದಾರೆ.

ಗ್ಯಾರಂಟಿ ಭರವಸೆ ಯಿಂದ ರಾಜ್ಯದಲ್ಲಿ ಅಧಿಕಾರಕ್ಕೆ ಬಂದು ಭ್ರಷ್ಟ ಆಡಳಿತ ನಡೆಸುತ್ತಿರುವ ಕಾಂಗ್ರೆಸ್ ಪಕ್ಷಕ್ಕೆ ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ರಾಜ್ಯದ ಜನ ಬಿಹಾರದ ರೀತಿಯಲ್ಲಿಯೇ ತಕ್ಕ ಶಾಸ್ತೀ ಮಾಡಲಿದ್ದಾರೆ ಕಾದು ನೋಡಿಎಂದರು.

ರಾಣೀಚೆನ್ನಮ್ಮ ವೃತ್ತದಲ್ಲಿ ಪಟಾಕಿ ಸಿಡಿಸಿ ಪರಸ್ಪರ ಸಿಹಿ ಹಂಚಿದ ಬಿಜೆಪಿ ಕಾರ್ಯಕರ್ತರು ಪಕ್ಷದ ಪರ ಘೋಷಣೆಯನ್ನು ಕೂಗುವ ಮೂಲಕ ಬಿಹಾರದ ಚುನಾವಣೆಯ ಫಲಿತಾಂಶವನ್ನು ಸಂಭ್ರಮಿಸಿದರು.

ಈ ವೇಳೆ ಬಿಜೆಪಿ ಪಕ್ಷದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಅಣ್ಣಪ್ಪ ಐರಣಿ, ಹರಿಹರ ಗ್ರಾಮಾಂತರ ಘಟಕದ ಅಧ್ಯಕ್ಷ ಲಿಂಗರಾಜ್ ಹಿಂಡಸಘಟ್ಟಿ, ನಗರಾಧ್ಯಕ್ಷ ಅಜೀತ್ ಸಾವಂತ್, ಪ್ರಧಾನ ಕಾರ್ಯದರ್ಶಿಗಳಾದ ತುಳಜಪ್ಪಾ ಬೊತೆ, ಮಂಜಾನಾಯ್ಕ್, ಮಾಜಿ ದೂಡಾ ಸದಸ್ಯ ಬಾತಿ ಚಂದ್ರಶೇಖರ್, ಮುಖಂಡರಾದ ಕಟಗಿ ಮಂಜುನಾಥ್, ನಂದಿತಾವರೆ ರಮೇಶ್, ನಾಗರಾಜ್ ಭಂಡಾರಿ, ಸಂತೋಷ್ ಗುಡಿಮನಿ, ಸ್ವಾತಿ ಹನುಮಂತಪ್ಪ, ಓಂ ನಾಗರಾಜ್, ವೈ ಪ್ರಭಾಕರ್, ಗೋಪಾಲಕೃಷ್ಣ, ಆದಿತ್ಯ ಮೆಹರ್ವಾಡೆ, ರವಿರಾಜ್‌ತಾವರಗಿ, ಬಿ.ಟಿ.ಚೇತನ್, ನಲ್ಲಿ ಮಂಜುನಾಥ್, ಐರಣಿ ರಾಜು, ಜಿಗಳಿ ಹನುಮಗೌಡ, ಬೆಣ್ಣೆ ಸಿದ್ದಪ್ಪ, ಮಾಲತೇಶ್ ಸೇರಿದಂತೆ ಇತರರಿದ್ದರು.

# ಕಾರ್ಯಕರ್ತರ ಶ್ರಮದಿಂದ ಬಿಹಾರದಲ್ಲಿ ಬಿಜೆಪಿ ಗೆಲುವು: ಅರುಣಕುಮಾರ ಪೂಜಾರ

ದಾ ನಗರವಣಿ ಸುದ್ದಿ



ರಾಣೇಬೆನ್ನೂರು, ನ. 14: ಸಾಮೂಹಿಕ ಕಠಿಣ ಪರಿಶ್ರಮ, ಬದ್ಧತೆ ಮತ್ತು ಆಳವಾದ ಸಂಪರ್ಕವನ್ನು ಬಿಹಾರ ಗೆಲುವು ಪ್ರತಿಬಿಂಬಿಸುತ್ತದೆ ಎಂದು ಮಾಜಿ ಶಾಸಕ ಅರುಣಕುಮಾರ ಪೂಜಾರ ಹೇಳಿದರು.

ನಗರದಲ್ಲಿ ಬಿಹಾರ ಗೆಲುವಿನ ಸಂಭ್ರಮಾಚರಣೆಯ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿಹಾರದ ಮಹತ್ವದ ಗೆಲುವಿಗಾಗಿ ಪ್ರಧಾನಿ ನರೇಂದ್ರ ಮೋದಿಜೀ, ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಜಿ ಮತ್ತು ಎಲ್ಲಾ ಸಮರ್ಪಿತ ಬಿಜೆಪಿ ಮತ್ತು ಎನ್ಡಿಎ ಪಕ್ಷದ ಕಾರ್ಯಕರ್ತರ ಶ್ರಮ ಅಡಗಿದೆ.

ಬಿಹಾರದ ದೀರ್ಘಕಾಲ ಸೇವೆ ಸಲ್ಲಿಸಿದ ಮುಖ್ಯಮಂತ್ರಿ ನಿತೀಶ್ ಕುಮಾರ್ ಜಿ ಅವರಿಗೆ ಮತ್ತೊಂದು ಗೆಲುವನ್ನು ಸಾಧಿಸಿದ್ದಕ್ಕಾಗಿ ವಿಶೇಷ ಅಭಿನಂದನೆಗಳು. ಅವರ ದೀರ್ಘ ಅನುಭವ, ಸ್ಥಿರ ಆಡಳಿತ ಮತ್ತು ರಾಜ್ಯಕ್ಕೆ ಸ್ಥಿರವಾದ ಸೇವೆ ಮತ್ತೊಮ್ಮೆ ಜನರ ವಿಶ್ವಾಸವನ್ನು ಗಳಿಸಿದೆ. ಈ ಜನಾದೇಶವು ಉಜ್ವಲ ಭವಿಷ್ಯದ ಜನರ ಭರವಸೆಯ ಪ್ರತಿಬಿಂಬವಾಗಿದೆ. ಪ್ರಧಾನಿ ಮೋದಿಜಿ ಅವರು ದೇಶವನ್ನು ಅಭಿವೃದ್ಧಿಯತ್ತ ಕೊಂಡೊಯ್ಯುವ ದೃಷ್ಟಿಕೋನ ಮತ್ತು ನಿತೀಶ್ ಕುಮಾರ್ ಜಿ ಅವರ ಆಡಳಿತದಲ್ಲಿ ಬಿಹಾರ ಪ್ರಗತಿಯ ಹಾದಿಯಲ್ಲಿ ಮುಂದುವರಿಯುತ್ತದೆ ಎಂದರು.

# ನಾಗೇಂದ್ರ ಬದಲು ಶಾಸಕ ರಘುಮೂರ್ತಿ ಮಂತ್ರಿಯಾಗಲಿ, ಬಹುಜನ ವೇದಿಕೆ

ದಾ ನಗರವಾಣಿ ಸುದ್ದಿ

ದಾವಣಗೆರೆ.ನ.14: ಬಳ್ಳಾರಿ ಗ್ರಾಮಾಂತರ ಶಾಸಕ ಬಿ.ನಾಗೇಂದ್ರ ಅವರು ಸಚಿವ ಸ್ಥಾನಕ್ಕೆ ಅರ್ಹರಿಲ್ಲದ ಕಾರಣ ಅವರಿಗೆ ಮತ್ತೆ ಸಚಿವ ಸ್ಥಾನ ನೀಡಬಾರದು ಎಂದು ಬಹುಜನ ಜಾಗೃತ ವೇದಿಕೆ ಒತ್ತಾಯಿಸಿದೆ.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ವೇದಿಕೆ ಅಧ್ಯಕ್ಷ ಮಂಜುನಾಥ್ ಕಂದಗಲ್ಲು ಮಾತನಾಡಿ, 2024-25ನೇ ಸಾಲಿನ ಬಜೆಟ್‌ನಲ್ಲಿ ಸರ್ಕಾರವು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಗೆ, ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಅಭಿವೃದ್ಧಿ ನಿಗಮಕ್ಕೆ ಪರಿಶಿಷ್ಟ ವರ್ಗಗಳ ಅಭ್ಯುದಯಕ್ಕಾಗಿ ಕಾಯ್ದಿರಿಸಿದ ಹಣದಲ್ಲಿ ಸುಮಾರು 200 ಕೋಟಿ ರೂ, ಅಕ್ರಮ ವರ್ಗಾವಣೆಯಾಗಿ ನಮ್ಮ ಸಮಾಜಕ್ಕೆ ನಷ್ಟವಾಗಿದೆ ಎಂದರು.

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಗೆ ಬಿ.ನಾಗೇಂದ್ರ ಅವರನ್ನು ಈ ಹಿಂದೆ ಮಂತ್ರಿಯನ್ನಾಗಿ ಮಾಡಿದ್ದು, ಸಮುದಾಯದ ಹಿತರಕ್ಷಣೆಗಾಗಿ, ಅಭಿವೃದ್ಧಿಗಾಗಿ ಹಾಗೂ ರಕ್ಷಣೆ ಮಾಡಲು ಮಂತ್ರಿಯನ್ನಾಗಿಸಿದ್ದು, ಆದರೆ ಈ ವ್ಯಕ್ತಿಯು ನೂರಾರು ಕೋಟಿ ರೂ. ಅಕ್ರಮವಾಗಿ ಮತ್ತು ಕಾನೂನು ಬಾಹಿರವಾಗಿ ಬೇರೆ ಬೇರೆ ಖಾತೆಗಳಿಗೆ ವರ್ಗಾವಣೆಯಾಗಲು ಕಾರಣೀಕೃತನಾಗಿರುವುದರಿಂದ ಈ ವ್ಯಕ್ತಿಗೆ ಪುನಃ ಮಂತ್ರಿ ಸ್ಥಾನವನ್ನು ನೀಡಿದಲ್ಲಿ ಕುರಿಗಳನ್ನು ಕಾಯಲು ತೋಳವನ್ನು ನೇಮಿಸಿದಂತಾಗುತ್ತದೆ ಎಂದು ವಿರೋಧ ವ್ಯಕ್ತಪಡಿಸಿದರು.

ಆದ್ದರಿಂದ ಮುಖ್ಯಮಂತ್ರಿಗಳು ಹಾಗೂ ಉಪ ಮುಖ್ಯಮಂತ್ರಿಗಳು ಸಂಪುಟ ಪುನರ್ ರಚನೆ ಮಾಡಿದಲ್ಲಿ ಕರ್ನಾಟಕ ರಾಜ್ಯದಲ್ಲಿ ಪರಿಶಿಷ್ಟ ಪಂಗಡದಿಂದ ಆಯ್ಕೆಯಾಗಿರುವ ಕಾಂಗ್ರೆಸ್ ಪಕ್ಷದ 14 ಜನ ಶಾಸಕರ ಪೈಕಿ ಚಿತ್ರದುರ್ಗ ಜಿಲ್ಲೆ, ಚಳ್ಳಕೆರೆ ಕ್ಷೇತ್ರದ ಕಾಂಗ್ರೆಸ್ ಶಾಸಕ ಟಿ. ರಘುಮೂರ್ತಿಯವರಿಗೆ ಮಂತ್ರಿ ಸ್ಥಾನವನ್ನು ನೀಡಬೇಕು ಎಂದು ಮನವಿ ಮಾಡಿದರು.3-4 ಬಾರಿ ಶಾಸಕರಾಗಿ ಆಯ್ಕೆಯಾಗಿರುವ ಟಿ. ರಘುಮೂರ್ತಿಯವರಿಗಾಗಲೀ ಅಥವಾ ಕಾಂಗ್ರೆಸ್ ಪಕ್ಷದಲ್ಲಿ ಪರಿಶಿಷ್ಟ ಪಂಗಡದ ಜನಾಂಗದ ಅಭಿವೃದ್ಧಿಗಾಗಿ ಹಗಲಿರುಳು ಶ್ರಮಿಸುತ್ತಿರುವ ಹಿರಿಯ ಕಾಂಗ್ರೆಸ್ ಶಾಸಕರಲ್ಲಿ ಯಾರನ್ನಾದರೂ ಮಂತ್ರಿಯನ್ನಾಗಿ ಮಾಡಲು ಸಿಎಂ ಹಾಗೂ ಡಿಸಿಎಂಗಳಿಗೆ ಈ ಮೂಲಕ ಮನವಿ ಮಾಡುತ್ತಿದ್ದೇವೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ವೇದಿಕೆಯ ಸೊಂಡೇಕೆರೆ ಶಿವಣ್ಣ, ತಿಪ್ಪೇಸ್ವಾಮಿ, ಮಿಲ್ಟ್ರೀ ಮಂಜುನಾಥ್, ಕಂಪ್ಲೇಶ್ ಇದ್ದರು.

# ಸಂಸದರ ಬೆಂಗಳೂರು ಪ್ರವಾಸ

ದಾವಣಗೆರೆ: ಸಂಸದರಾದ ಡಾ. ಪ್ರಭಾ ಮಲ್ಲಿಕಾರ್ಜುನ ವರು ಖಾಸಗಿ ಕಾರ್ಯಕ್ರಮ ನಿಮಿತ್ತ ಇಂದು ಸಂಜೆ ಬೆಂಗಳೂರಿಗೆ ತೆರಳಿದ್ದು, ದಿನಾಂಕ 19.11.2025ನೇ ಬುಧವಾರ ನಗರಕ್ಕೆ ಹಿಂದಿರುಗಲಿದ್ದಾರೆ ಅಲ್ಲಿಯವರೆಗೂ ಸಂಸದರು ಸಾರ್ವಜನಿಕರ ಭೇಟಿಗೆ ಲಭ್ಯವಿರುವುದಿಲ್ಲ ಎಂದು ಆಪ್ತ ಸಹಾಯಕ ಹರೀಶ್ ಕೆಎಲ್ ಬಸಾಪುರ ತಿಳಿಸಿದ್ದಾರೆ.

## ವಲಯ ಕಛೇರಿ-1 ಮಹಾನಗರ ಪಾಲಿಕೆ, ದಾವಣಗೆರೆ

ರಾಜೀವ ಗಾಂಧಿ ಬಡಾವಣೆ, ದಾವನಗೆರೆ-577001 ಇ-ಮೇಲ್ ravenuezonal01@gmail.com

ಸಂ: ದಾಮನಪಾ/ವಕ-1/ಕಂ.ಶಾ/ಸಿಆರ್/2025-26 ದಿನಾಂಕ 13.11.2025

### ಸಾರ್ವಜನಿಕ ಪ್ರಕಟಣೆ

ದಾವಣಗೆರೆ ಮಹಾನಗರ ಪಾಲಿಕೆ ವಲಯ ಕಛೇರಿ-01ರ ವ್ಯಾಪ್ತಿಯಲ್ಲಿ ಬರುವ ವಾರ್ಡ್ ನಂಬರ್ 16ರಲ್ಲಿ ಬರುವ ಡೋರ್ ನಂಬರ್ 774/2ರ ಅಳತೆ 25x30 ಅಡಿ ಸ್ವತ್ತು 1955-56ನೇ ಸಾಲಿನಿಂದ 2000-2001ರ ವರೆಗೆ ಎಂ.ಎ.ಆರ್-19ರ ದಾಖಲೆ ವಹಿಯಲ್ಲಿ ಬಳ್ಳಾರಿ ನಿಂಗಪ್ಪ ಬಿನ್ ಬಸಪ್ಪ ಎಂಬುದಾಗಿ ಖಾತೆ ಮುಂದುವರೆದಿದ್ದು, ಸದರಿ ಸ್ವತ್ತನ್ನು ಇಬ್ಬರು ಮಕ್ಕಳಾದ 1) ಈರಪ್ಪ 2) ಬಿಎನ್ ಸೋಮಣ್ಣ ಅವರ ಹೆಸರಿಗೆ ಪೌತಿ ಖಾತೆ ಆಗಿರುವುದಾಗಿ ಮನವಿ ಪತ್ರದಲ್ಲಿ ತಿಳಿಸಿದ್ದು, ಈ ಸ್ವತ್ತಿನ ಪೈಕಿ 12.5x30 ಅಡಿ ಸ್ವತ್ತನ್ನು ಈರಪ್ಪ ಎಂಬುವರು ಆ ಭಾಗದ ಸ್ವತ್ತನ್ನು ಮಾರಾಟ ಮಾಡಿರುತ್ತಾರೆ. ಈ ಪೈಕಿ ಉಳಿದ ಸ್ವತ್ತನ್ನು ಈರಪ್ಪ ಮತ್ತು ಸೋಮಣ್ಣ ಇವರ ಬಾಬ್ತು ಇರುವುದಾಗಿ ಇವರ ಕುಟುಂಬದ ವಾರಸುದಾರರಾದ 1) ಉಮಾ 2) ಪದ್ಮಾ ಬಿಎಸ್ 3) ಎಸ್ ರವಿ 4) ಚಂದ್ರ ಎಸ್ ಅವರುಗಳು ತಂದೆ ಸೋಮಣ್ಣ ಮತ್ತು ತಾಯಿ ಹನುಮಕ್ಕ ಅವರ ಪೌತಿ ಹೊಂದಿದ್ದ ಪ್ರಯುಕ್ತ ಸದರಿ ಸ್ವತ್ತನ್ನು ಮಾನ್ಯ ತಹಶೀಲ್ದಾರ್ ರವರು ನೀಡಿರುವ ವಂಶವೃಕ್ಷ ಆಧಾರದ ಮೇಲೆ ಪೌತಿ ಖಾತೆ ಮಾಡಲು ದಿನಾಂಕ 17.09.2025ರಂದು ಅರ್ಜಿ ಸಲ್ಲಿಸಿರುವುದು ಹಾಗೂ ಸದರಿ ಸ್ವತ್ತಿನ ದಾಖಲೆಗಳು ಮನೆಗೆ ಬೆಂಕಿ ಬಿದ್ದು ಸುಟ್ಟು ಹೋಗಿರುವುದಾಗಿ ತಿಳಿಸಿ ಪೌತಿ ಖಾತೆ ಮಾಡಲು ಸಾರ್ವಜನಿಕ ಪ್ರಕಟಣೆ ಪ್ರಚುರಪಡಿಸಲಾಗಿದೆ. ಆದುದರಿಂದ ಈ ಬಗ್ಗೆ ಸಾರ್ವಜನಿಕ ಪ್ರಕಟಣೆಗೆ ಹೊರಡಿಸಿದ 30 ದಿನದೊಳಗಾಗಿ ಏನಾದರೂ ಆಕ್ಷೇಪಣೆ ಇದ್ದಲ್ಲಿ ಖುದ್ದಾಗಿ ಮೂಲ ದಾಖಲೆಗಳೊಂದಿಗೆ ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳಿಗೆ ಆಕ್ಷೇಪಣೆ ಸಲ್ಲಿಸತಕ್ಕದ್ದು. ಅವಧಿ ಮುಗಿದ ನಂತರ ಯಾವುದೇ ಆಕ್ಷೇಪಣೆಳನ್ನು ಪರಿಗಣಿಸುವುದಿಲ್ಲ ಎಂಬ ಅಂಶವನ್ನು ಈ ಮೂಲಕ ತಿಳಿಯಪಡಿಸಿದೆ.

ವಲಯ ಆಯುಕ್ತರು
ವಲಯ ಕಚೇರಿ-01, ಮಹಾನಗರ ಪಾಲಿಕೆ, ದಾವಣಗೆರೆ

## DAVANGERE SUGAR COMPANY LIMITED

L10721KA1970PLC001949 - 73/1, Post Box No.312, Shamanur Road, Davangere 577004.
Email: davangeresugars@gmail.com - accounts@davangeresugars.com - website: www.davangeresugar.com

### Extract of Un-Audited Financial Results for the Quarter and Half Year ended September 30, 2025

(Rs. in Lakhs except EPS)

| Sr. No | Particulars | Quarter Ended | | | Half-Year ended (Standalone) | |
|---|---|---|---|---|---|---|
| | | 30.09.2025 | 30.06.2025 | 30.09.2024 | 30.09.2025 | 30.09.2024 |
| 1 | Revenue from Operations<br>Other income | 4,819.26<br>57.72 | 2,407.01<br>46.28 | 3,932.93<br>44.70 | 7,226.27<br>104.00 | 8,490.09<br>79.63 |
| | **Total Income** | **4,876.98** | **2,453.29** | **3,977.63** | **7,330.27** | **8,569.72** |
| 2 | Net Profit / (Loss) for the period (before Tax, Exceptional and/or Extraordinary items) | 333.16 | 172.50 | 178.91 | 505.66 | 315.14 |
| 3 | Net Profit / (Loss) for the period before tax (after Exceptional and/or Extraordinary items) | 333.16 | 172.50 | 178.91 | 505.66 | 315.14 |
| 4 | Net Profit / (Loss) for the period after tax (after Exceptional and/or Extraordinary items) | 262.99 | 130.42 | 128.54 | 393.41 | 222.56 |
| 5 | Total Comprehensive Income for the period [Comprising Profit / (Loss) for the period (after tax) and Other Comprehensive Income (after tax)] | 262.99 | 130.42 | 128.54 | 393.41 | 222.56 |
| 6 | **Equity Share Capital** | **14,299.91** | **9,408.44** | **9,408.44** | **14,299.91** | **9,408.44** |
| 7 | Earnings Per Share (for continuing and discontinued operations)<br>1. Basic:<br>2. Diluted: | <br><br>0.02<br>0.02 | <br><br>0.01<br>0.01 | <br><br>0.14<br>0.14 | <br><br>0.03<br>0.03 | <br><br>0.24<br>0.24 |

NOTE: a) The above is an extract of the detailed format of Quarterly Financial Results filed with the Stock Exchanges under Regulation 33 of the SEBI (Listing and Other Disclosure Requirements) Regulations, 2015. The full formats of the Quarterly Financial Results are available on the websites of stock exchange i.e., www.bseindia.com, www.nseindia.com and on the website of the Company i.e., www.davangeresugar.com and can be accessed through the given QR code.

Place: Davangere
Date : 13th November,2025

For DAVANGERE SUGAR COMPANY LIMITED
Sd/- Ganesh S Shamanur
Managing Director
DIN: 00451383


**ವಸಂತ** 4K DOLBY ATMOS
ದಿನ 4 ಆಟಗಳು
14-11-2025ರಿಂದ ಪ್ರಾರಂಭ
Tickets are available in Paytm
ಹಿಂದಿ ಚಿತ್ರ
ಚಿತ್ರ ಪ್ರದರ್ಶನ ಸಮಯ: ಬೆ.11ಕ್ಕೆ, ಮ:2ಕ್ಕೆ, ಸಂ.6ಕ್ಕೆ, ರಾ.9ಕ್ಕೆ




**ಅಶೋಕ** DOLBY DIGITAL dts
ದಿನ 4 ಆಟಗಳು
ಭರ್ಜರಿ ಜನಭರಿತ 3ನೇ ವಾರ
ticket avabale bookmyshow
ಕನ್ನಡ ಚಿತ್ರ
ಸಮಯ: ಬೆ:-11ಕ್ಕೆ, ಮ-2ಕ್ಕೆ ಸಂ-6ಕ್ಕೆ,: ರಾ-9ಕ್ಕೆ




ಗೋಲ್ಡನ್ ಕ್ಲಾಸ್: 250 ರೂ, ಬಾಲ್ಕನಿ: 200 ರೂ, ಫಸ್ಟ್ ಕ್ಲಾಸ್: 150 ರೂ

**ಗೀತಾಂಜಲಿ** DOLBY DIGITAL dts
ದಿನ 4 ಆಟಗಳು
14-11-2025ರಿಂದ ಪ್ರಾರಂಭ
ಕನ್ನಡ ಚಿತ್ರ
ಸಮಯ: ಬೆಳಗ್ಗೆ: 11, ಮಧ್ಯಾಹ್ನ: 2ಕ್ಕೆ
ಸಮಯ:, 4.15, 6.15, 9.15 ಪಿ.ಎಂ




